# ಮೃಗತೃಷ್ಣೆ

THE MIRAGE

■ ಕೇಶವರೆಡ್ಡಿ ಹಂದ್ರಾಳ
ಕಲೆ: ಮನೋಹರ ಆಚಾರ್ಯ

## ಎರಡು ಸಾವುಗಳ ನಡುವೆ ನೂರೆಂಟು ನೆನಪು

ಭಾಗ 20

ಆ ಸ್ಯೂಟ್‌ಗೊಂದು ಕಿಚನ್ ಕೂಡಾ ಇದೆಯೆಂದು ಗೋಡೆಗಂಟಿಕೊಂಡಂತಿದ್ದ ಬಾಗಿಲನ್ನು ತೆರೆದುಕೊಂಡು ಕರುತ್ತಮ್ಮ ಹೊರಬಂದಾಗಲೇ ತಿಳಿದಿದ್ದು. ಸಿಂಧೂ ಮೆನನ್ ಮತ್ತು ಆಮ್ರಪಾಲಿ ನಾನು ಕುಳಿತಿದ್ದ ಸೋಫಾದ ಎದುರು ಸೋಫಾದ ಮೇಲೆ ಬಂದು ಕುಳಿತಿದ್ದರು. ದಟ್ಟ ಹಸಿರು ಗಾಜಿನ ಟೀಪಾಯ್ ಮೇಲೆ ಕರುತ್ತಮ್ಮ ಮೂರು ಗ್ಲಾಸ್ ಮತ್ತು ವಿದೇಶಿ ವಿಸ್ಕಿ ಬಾಟಲೊಂದನ್ನು ತಂದಿಟ್ಟಿದ್ದಳು. ಜೊತೆಗೆ ಹಬೆಯಾಡುವ ಫಿಶ್ ಮತ್ತು ಚಿಕನ್ ಐಟಂಗಳು ಮೂರು ಪ್ಲೇಟುಗಳಲ್ಲಿ. 'ನಿಮಗೆ ಎಷ್ಟು ಡ್ರಿಂಕ್ಸ್ ಬೇಕೋ ಅಷ್ಟು ಹಾಕಿಕೊಂಡು ಕುಡಿಯಬಹುದು, ಇಲ್ಲಿ ಯಾವುದಕ್ಕೂ ಬಲವಂತವಿಲ್ಲ' ಎಂದು ಆಮ್ರಪಾಲಿ ತಮ್ಮ ಗ್ಲಾಸಿಗೆ ಒಂದು ಪೆಗ್ ವಿಸ್ಕಿಯನ್ನು ಹಾಕಿಕೊಂಡಿದ್ದಳು. ಅಷ್ಟೇ ವಿಸ್ಕಿಯನ್ನು ಸಿಂಧೂ ಮೆನನ್‌ಗೂ ಹಾಕಿಕೊಟ್ಟಿದ್ದರು. ವಿಸ್ಕಿಯ ಜೊತೆ ಸೋಡಾ ಮತ್ತು ನೀರನ್ನು ಬೆರೆಸಿಕೊಂಡಿದ್ದೆ ನಾನು. ಅವರು ಡ್ರಿಂಕ್ಸ್ ಗೆ ಏನನ್ನೂ ಬೆರೆಸಿಕೊಳ್ಳದೆ ತೊಟ್ಟು ತೊಟ್ಟು ವಿಸ್ಕಿಯನ್ನು ನಾಲಿಗೆಗೆ ಸವರಿಕೊಳ್ಳುವಂತೆ ಕುಡಿಯುತ್ತಿದ್ದರು.

ನಾನೊಮ್ಮೆ ವಿಸ್ಕಿ ಗುಟುಕರಿಸಿ ಮಂಚದ ಮೇಲೆ ಕದಲದೆ ಮಲಗಿದ್ದ ಯುವತಿಯ ಕಡೆ ನೋಡಿದ್ದೆ. 'ಈ ಗೆಸ್ಟ್ ಹೌಸ್ ಅಲ್ಲದೆ, ನೂರಾರು ಕೋಟಿ ಬೆಲೆಬಾಳುವ ಆಸ್ತಿಗಳ ಒಡತಿ ಅವಳು. ಸದ್ಯಕ್ಕೆ ನನ್ನ ಪೇಶೆಂಟ್.' ಆಮ್ರಪಾಲಿಯವರಿಗೆ ನಲವತ್ತು ವರ್ಷ ಮೀರಿ ವಯಸ್ಸಾಗಿದ್ದರೂ ಅದ್ಭುತ ಪರ್ಸನಾಲಿಟಿಯೊಂದಿಗೆ ಆಕರ್ಷಕವಾಗಿ ಕಾಣುತ್ತಿದ್ದರು.

'ಏನಾಗಿದೆ ಅವಳಿಗೆ?' ಕೇಳಿದ್ದೆ.

'ಬಾರ್ಡರ್ ಲೈನ್ ಪರ್ಸನಾಲಿಟಿ ಡಿಸಾರ್ಡರ್‌ನಿಂದ ನರಳುತ್ತಿದ್ದಾಳೆ. ಈಗ ಓಕೆ, ರಿಕವರ್ ಆಗ್ತಿದಾಳೆ. ಮತ್ತೆ ಅದು ಮರುಕಳಿಸದಂತೆ ಅವಳನ್ನು ಪ್ರಿಪೇರ್ ಮಾಡುತ್ತಿದ್ದೇವೆ. ನಾನು ರಾಮ್ ಮನೋಹರ್ ಲೋಹಿಯಾ ಆಸ್ಪತ್ರೆಯಲ್ಲಿ ಆರು ವರ್ಷಗಳಿಂದ ಕೆಲಸ ಮಾಡ್ತಾ ಇದ್ದೀನಿ. ಅದೊಂದು ಪ್ರತಿನಿತ್ಯದ ಜಾತ್ರೆ. ದಿನವೂ ಪೇಶಂಟ್‌ಗಳ ನೂಕುನುಗ್ಗಲು. ಕೇವಲ ಆರು ವರ್ಷಗಳಲ್ಲಿ ಒಂದು ಲಕ್ಷಕ್ಕೂ ಮೀರಿ ನಾನು ಬಡ ಪೇಶಂಟ್‌ಗಳನ್ನು ಟ್ರೀಟ್ ಮಾಡಿರಬಹುದೇನೋ, ಆದರೆ ಯಾವೊತ್ತು ನಮ್ಮ ಈ ಪೂನಂ ಎದುರಿಸುತ್ತಿರುವಂತಹ ವ್ಯಾಧಿಯನ್ನು ಎದುರಿಸುತ್ತಿದ್ದವರಾರನ್ನೂ ನೋಡಿರಲಿಲ್ಲ. ನಾನು ಅನೇಕ ಸಾರಿ ಮುಂಬೈನ ಧಾರಾವಿ ಮತ್ತು ಕೋಲ್ಕತ್ತಾದ ಸೋನಾಗಾಚಿ ಕೊಳಗೇರಿಗಳಲ್ಲಿ ಆಯೋಜಿಸುತ್ತಿದ್ದ ಹೆಲ್ತ್ ಕ್ಯಾಂಪ್‌ಗಳಲ್ಲಿ ಭಾಗವಹಿಸಿದ್ದೇನೆ. ಕೊಳಗೇರಿಗಳಲ್ಲಿ ಜನ ಹಂದಿಗಳಿಗಿಂತಲೂ ಅಧ್ವಾನದ ಸ್ಥಿತಿಯಲ್ಲಿ ಬದುಕುತ್ತಿರುತ್ತಾರೆ. ಮೂರು ಹೊತ್ತೂ ಊಟ ಮತ್ತು ಬಟ್ಟೆಗಾಗಿ ಬಡಿದಾಡುತ್ತಿರುತ್ತಾರೆ. ತೀವ್ರ ವಸತಿ ಕೊರತೆಯಿಂದಾಗಿ ನೆಮ್ಮದಿಯಾಗಿ ಒಂದು ದಿನವೂ ಮಲಗಲಾರರು. ನಮ್ಮಂತೆ ನೆಮ್ಮದಿಯಾಗಿ ಸೆಕ್ಸನ್ನು ಅನುಭವಿಸಲಾರರು. ಸ್ನಾನ ಮಾಡಲಾರರು. ಅದಕ್ಕಿಂತಲೂ ಮಿಗಿಲಾಗಿ ತಮ್ಮ ಮಲಮೂತ್ರಗಳನ್ನೂ ತೃಪ್ತಿಯಾಗಿ ವಿಸರ್ಜಿಸಲಾರರು. ವಿಸರ್ಜನೆ ಇದೆಯಲ್ಲ... ಅದನ್ನು ಟೈಮಿಗೆ ಸರಿಯಾಗಿ ಮಾಡದಿದ್ದರೆ, ಅದೊಂದು ನರಕಯಾತನೆಯೇ ಸರಿ' ಎಂದು ವಿಸ್ಕಿಯನ್ನು ಕುಡಿಯುತ್ತಲೇ ಮಾತನಾಡುತ್ತಿದ್ದಳು.

ನನಗೆ ಪೂನಂ ಎಂಬ ಆ ಯುವತಿಯ ಬಗ್ಗೆ ಫೋನಿನಲ್ಲಿ ಸಿಂಧೂ ಮೆನನ್ ಹೇಳಿದ್ದು ನೆನಪಾಗಿತ್ತು. ಯಾವುದೋ ಕ್ರಿಮಿನಲ್ ಕೇಸ್ ಕೂಡಾ ಆ ಯುವತಿಯ ಸುತ್ತ ಸುತ್ತಿಕೊಂಡಿರುವುದಾಗಿಯೂ ಹೇಳಿದ್ದು ನೆನಪಾಗಿತ್ತು. 'ಪೂನಂಳ ಸಮಸ್ಯೆಗೆ ಎಕ್ಸಾಕ್ಟ್ ಕಾರಣವೇನಿರಬಹುದು? ನಾನೂ ಸೈಕಾಲಜಿ ವಿದ್ಯಾರ್ಥಿಯಾಗಿರುವುದರಿಂದ ಒಂದಿಷ್ಟು ಆಸಕ್ತಿ ಜಾಸ್ತಿಯಷ್ಟೆ' ಎಂದು ಆಮ್ರಪಾಲಿಯ ಕಡೆ ನೋಡುತ್ತಾ ಕೇಳಿದ್ದೆ.

'ನೀವು ಸೈಕಾಲಜಿ ಜೊತೆಗೆ ಮೆಡಿಸಿನ್ ಓದಿದ್ದಿದ್ದರೆ ಇನ್ನಷ್ಟು ವಿಸ್ಮಯದ ಸಂಗತಿಗಳು ನಿಮಗೆ ದಕ್ಕುತ್ತಿದ್ದವು. ಬಡವರಿಗಿಂತಲೂ ಶ್ರೀಮಂತರಲ್ಲೇ **frustration** ಜಾಸ್ತಿ ತುಂಬಿರೋದು. ಕಳೆದುಕೊಳ್ಳುವ ಭಯದ ಡೆನ್ಸಿಟಿ ಪಡೆದುಕೊಳ್ಳುವ ಸುಖದ ಡೆನ್ಸಿಟಿಗಿಂತಲೂ ತುಂಬಾ ಜಾಸ್ತಿಯಿರುತ್ತದೆ. ಇದೊಂದು ಯಾರಿಗೂ ಅರ್ಥವಾಗದ, ಯಾರ ಹಿಡಿತಕ್ಕೂ ಬಾರದ ಮೆಂಟಲ್ ಗೇಮ್. ಇಂಥ ಮೈಂಡ್ ಗೇಮ್ ದೇಹಗಳ ಮೇಲೆ ವಿಪರೀತವಾದ ಪರಿಣಾಮಗಳನ್ನು ಉಂಟು ಮಾಡುತ್ತದೆ. ಆದರೆ ದೇಹದ ವ್ಯವಹಾರ ಮನಸ್ಸಿನ ವ್ಯವಹಾರಕ್ಕಿಂತ ತುಂಬಾ ಭಿನ್ನವಾಗಿರುತ್ತದೆ. ದೇಹಗಳಲ್ಲಿ ಪಡೆದುಕೊಳ್ಳುವಾಗ ಆವಿರ್ಭವಿಸುವ ಸುಖದ ತೀವ್ರತೆಗಿಂತಲೂ ಕಳೆದುಕೊಳ್ಳುವಾಗ ಆವಿರ್ಭವಿಸುವ ಸುಖದ ತೀವ್ರತೆ ಹೆಚ್ಚಾಗಿರುತ್ತದೆ. ಮಲಮೂತ್ರ ವಿಸರ್ಜಿಸುವಾಗ ಮತ್ತು ವೀರ್ಯ ಸ್ಖಲನವಾಗುವಾಗ ದೇಹಗಳು ಅನುಭವಿಸುವ ಆನಂದ ಅನನ್ಯವಾಗಿರುತ್ತದೆ. ನಾನು ಈ ಮೊದಲೇ ಹೇಳಿದ್ದೆ, ಇವಳು ಬಾರ್ಡರ್ ಲೈನ್ ಪರ್ಸನಾಲಿಟಿ ಡಿಸಾರ್ಡರ್‌ನಿಂದ ಬಳಲುತ್ತಿದ್ದಾಳೆ ಎಂದು. ಹಾಗೆ ನೋಡಿದರೆ ಈ ವ್ಯಾಧಿ ಯುವತಿಯರಲ್ಲೇ ಜಾಸ್ತಿ. ಅದರಲ್ಲೂ ಶ್ರೀಮಂತ ವರ್ಗದ ಹೆಣ್ಣು ಮಕ್ಕಳಲ್ಲಿ ಮತ್ತು ಸಿಟಿ ಹುಡುಗಿಯರಲ್ಲಿ ಅಧಿಕವಾಗಿ ಕಾಣಿಸಿಕೊಳ್ಳುತ್ತದೆ. ಇಂಥವರು ತುಂಬಾನೇ ಅತಂತ್ರ ಮನಸ್ಥಿತಿಯವರಾಗಿರುತ್ತಾರೆ. ತಮ್ಮನ್ನೇ ತಾವು ನಂಬದವರಾಗಿರುವುದರಿಂದ ಬೇರೆಯವರನ್ನು ನಂಬಲು ಸದಾ ಹಿಂಜರಿಯುತ್ತಿರುತ್ತಾರೆ. ಇವಳ ಮನಸ್ಥಿತಿ ಈ ಮಟ್ಟಕ್ಕೆ ಕುಸಿಯಲು ಇವಳ ತಾಯಿಯ ಸಾವು ಕಾರಣ' ಎಂದು ಆಮ್ರಪಾಲಿ ಮಾತು ನಿಲ್ಲಿಸಿ, ಮಲಗಿದ್ದ ಪೂನಂ ಬಳಿ ಹೋಗಿ, ಹಣೆಯನ್ನು ಪರೀಕ್ಷೆ ಮಾಡುವಂತೆ ಸವರಿ ತಮ್ಮ ಜಾಗದಲ್ಲಿ ಮತ್ತೆ ಬಂದು ಕುಳಿತರು.

ನಾನು ದೆಹಲಿಯಿಂದ ಮುಖ್ಯವಾಗಿ ಬಂದದ್ದು ಸಿಂಧೂ ಮೆನನ್ನಳನ್ನು ನೋಡಲು. ಆಮ್ರಪಾಲಿ ಮಾತನಾಡುತ್ತಿದ್ದರೆ ಸಿಂಧೂ ಮೆನನ್ ತಲೆ ಆಡಿಸುತ್ತಾ ಕೂತಿದ್ದಳು. ಆಮ್ರಪಾಲಿ ಮತ್ತೆ ಮಾತನಾಡಲಾರಂಭಿಸಿದರು: 'ಈ ಹುಡುಗಿಗೆ ಎಚ್ಚರವಾಗುವುದು ಹನ್ನೆರಡು ಗಂಟೆಗೆ. ನನ್ನನ್ನು, ಸಿಂಧೂಳನ್ನು ತುಂಬಾ ಹಚ್ಚಿಕೊಂಡಿದ್ದಾಳೆ.